## ಭಾಗ - 4

ಆ ದಿನ ಬಂದೇಬಿಟ್ಟಿತು. ನಾನು ಎರಡು ದಿನದಿಂದ ಅದಕ್ಕಾಗಿ ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದೆ. ನನಗೆ ಮತ್ತು ವಸುಂಧರೆಗೆ ಹೊಸ ಉಡುಗೆ ತೊಡುಗೆಗಳನ್ನು ಖರೀದಿಸಿ, ವಿಶೇಷ ಊಟ ತಯಾರಿಸಲು ಬೇಕಾದ ಎಲ್ಲಾ ಪದಾರ್ಥಗಳ ಜೊತೆಗೆ ಪ್ರೊಫೆಸರಿಗಾಗಿ ಅವರ ಮೆಚ್ಚಿನ ಬಕಾರ್ಡಿ ರಮ್ಮಿನ ಬಾಟಲನ್ನೂ ತಂದು ಇಟ್ಟಿದ್ದೆ. ವಸುಂಧರೆಗೆ ಏನೇನು, ಎಷ್ಟೆಷ್ಟು ಮತ್ತು ಎಷ್ಟು ಹೊತ್ತಿಗೆ ತಯಾರಿಸಬೇಕೆಂದು ಹೇಳಿ ನಾನು ಕಾರ್ಖಾನೆಗೆ ಹೋದೆ.

ಕಾರ್ಖಾನೆಯಲ್ಲಿದ್ದರೂ ನಾನು ಎಷ್ಟು ಹೊತ್ತಿಗೆ ಸಂಜೆಯಾಗುತ್ತದೆಂದು ಕಾತುರದಿಂದ ಕಾಯತೊಡಗಿದೆ. ಏನೋ ಖುಷಿ! ಯಾವುದೋ ಸಂತೋಷ! ನನ್ನ ಮನಸ್ಸು ವಸುಂಧರೆಯೊಂದಿಗೆ ಕಳೆದ ಪ್ರತಿಕ್ಷಣಗಳನ್ನೂ ಮೆಲುಕುಹಾಕುತ್ತಿತ್ತು. ಇನ್ನು ಮುಂದೆ ಅವಳು ನನ್ನ ಅಧಿಕೃತ ಸಂಗಾತಿ.

ಹೇಗೋ ಸಂಜೆಯಾಯಿತು. ಐದು ಗಂಟೆಗೆಲ್ಲಾ ಕಾರ್ಖಾನೆಯಿಂದ ಹೊರಟುಬಿಟ್ಟೆ. ನಾನು ವಸುಂಧರೆಗಾಗಿ ಒಂದು ಮೊಬೈಲ್ ಫೋನು ಖರೀದಿಸಿಕೊಟ್ಟಿದ್ದೆ. ಆಕೆ ಅತ್ತಲಿಂದ ಎಂದೂ ಫೋನು ಮಾಡದಿದ್ದರೂ ಪ್ರತಿದಿನ ಕಾರ್ಖಾನೆ ತಲುಪಿದ ಮೇಲೆ, ಮಧ್ಯಾಹ್ನ ಊಟದ ಸಮಯದಲ್ಲಿ ಮತ್ತು ನಾನು ಕಾರ್ಖಾನೆಯಿಂದ ಫ್ಲ್ಯಾಟಿಗೆ ಹೊರಡುವ ಮುನ್ನ ಅವಳಿಗೆ ಕರೆ ಮಾಡುತ್ತಿದ್ದೆ. ತಕ್ಷಣವೇ ಕರೆ ಸ್ವೀಕರಿಸಿ ಮಾತನಾಡುತ್ತಿದ್ದಳು. ಈವತ್ತು ಯಾವುದೋ ಸಂತೋಷದಲ್ಲಿ ನನ್ನನ್ನೇ ನಾನು ಮರೆತಿದ್ದವನು ಆಕೆಗೆ ಕರೆ ಮಾಡಿರಲಿಲ್ಲ. ಕಾರು ಹತ್ತುವ ಮುನ್ನ ವಸುಂಧರೆಗೆ ಕರೆ ಮಾಡಿದೆ. ಫೋನು ರಿಂಗಾಯಿತೇ ಹೊರತು ಆಕೆ ಸ್ವೀಕರಿಸಲಿಲ್ಲ. ಎಂದೂ ಹೀಗೆ ಆಗಿರಲಿಲ್ಲ! ಎದೆ ಡವಗುಟ್ಟತೊಡಗಿತು. ಮತ್ತೆ ಮತ್ತೆ ಕರೆ ಮಾಡಿದೆ. ಉತ್ತರವಿಲ್ಲ.

“ಸಮ್‌ಥಿಂಗ್ ರಾಂಗ್... ಸಮ್‌ಥಿಂಗ್ ರಾಂಗ್... ಸಮ್‌ಥಿಂಗ್ ರಾಂಗ್...” ನನ್ನ ಒಳಮನಸ್ಸು ಹೇಳತೊಡಗಿತು. ನಾನು ತಲ್ಲಣಿಸಿಹೋದೆ. ದೇಹವೆಲ್ಲಾ ಸಣ್ಣಗೆ ಕಂಪಿಸತೊಡಗಿತು. ಫ್ಲ್ಯಾಟಿಗೆ ಹೇಗೆ ಬಂದೆನೆಂದು ತಿಳಿಯಲಿಲ್ಲ. ಬಂದವನೇ ಎಂದಿನಂತೆ ಬಾಗಿಲಿನ ಬಳಿಯಿದ್ದ ಕಾಲಿಂಗ್ ಬೆಲ್ ಒತ್ತಿದೆ. ಉತ್ತರವಿಲ್ಲ! ಪದೇ ಪದೇ ಒತ್ತಿದೆ! ಉತ್ತರವಿಲ್ಲ! ಸಮ್ ಥಿಂಗ್ ರಾಂಗ್! ಕೊನೆಗೆ ವಿಧಿಯಿಲ್ಲದೇ ನನ್ನ ಬಳಿಯಿದ್ದ ಬಾಗಿಲಿನ ಕೀ ಉಪಯೋಗಿಸಿ ಬಾಗಿಲು ತೆರೆದೆ. ಒಳಗಿನ ದೃಶ್ಯ ಕಂಡು ನಾನು ಭೂಮಿಗಿಳಿದು ಹೋದೆ!

ನನ್ನ ವಸುಂಧರೆ... ನನ್ನ ಪ್ರೀತಿಯ ವಸುಂಧರೆ... ನನ್ನ ಆಪ್ತಸ್ನೇಹಿತೆ ವಸುಂಧರೆ ನಿರ್ಜೀವ ಬೊಂಬೆಯಾಗಿ ಹಾಲಿನಲ್ಲಿ ಬಿಳಿಯ ವಿಟ್ರಿಫೈಡ್ ನೆಲದ ಮೇಲೆ ಎರಡೂ ಕೈಗಳನ್ನೂ ಚಾಚಿಕೊಂಡು ನಿಶ್ಚಲವಾಗಿ ಬಿದ್ದಿದ್ದಳು.

“ವಸೂ... ವಸೂ... ವಸೂ... ಓ ಮೈ ಲವ್...” ಎಂದು ಹಲುಬುತ್ತಾ ನೆಲದ ಮೇಲೆ ಕುಸಿದು ಕುಳಿತು ಆಕೆಯ ತಲೆಯನ್ನು ನನ್ನ ತೊಡೆಯ ಮೇಲಿಟ್ಟುಕೊಂಡು ಆಕೆಯ ಕೆನ್ನೆಯನ್ನು ಅಲುಗಾಡಿಸಿ “ಅಯ್ಯೋ ದೇವರೇ... ಏನು ಮಾಡಿಬಿಟ್ಟೆ... ನನ್ನ ವಸೂಗೆ ಏನು ಮಾಡಿಬಿಟ್ಟೆ...” ಎಂದು ದುಃಖದಿಂದ ಅಳುತ್ತಾ ಇನ್ನಿಲ್ಲದಂತೆ ಪ್ರಲಾಪಿಸತೊಡಗಿದೆ. ಆಕೆಯ ಎದೆಯನ್ನು ಮುಟ್ಟಿ ನೋಡಿದೆ. ಎದೆ ಬಡಿತ ನಿಂತುಹೋಗಿತ್ತು.

ಆಕೆಗೆ ಶಕ್ತಿ ಕೊಡುತಿದ್ದ ಬ್ಯಾಟರಿ ಚಾರ್ಜ್ ಆಗದೇ ಇರಬಹುದೇ ಎಂಬ ಕೊನೆಯ ಭರವಸೆಯೊಂದು ಮೂಡಿ ಗೋಡೆಯಲ್ಲಿದ್ದ ಚಾರ್ಜರಿನ ಕಡೆ ಮೆಲ್ಲಗೆ ತಲೆ ಎತ್ತಿ ನೋಡಿದೆ. ಹಸಿರು ದೀಪ ಬೆಳಗುತ್ತಿತ್ತು. ಅಲ್ಲಿಗೆ ನಾನು ತೀರ್ಮಾನಿಸಿಕೊಂಡೆ. ನನ್ನ ವಸುಂಧರೆಯ ಕತೆ ಮುಗಿಯಿತು!

ತಕ್ಷಣವೇ ನನಗೆ ವಸುಂಧರೆಯ ಜನ್ಮದಾತ ಪ್ರೊಫೆಸರರ ನೆನಪಾಯಿತು. ತಡ ಮಾಡದೇ ಫೋನು ತೆಗೆದವನೇ ಪ್ರೊಫೆಸರರಿಗೆ ಫೋನು ಮಾಡಿದೆ. ಕರೆ ಹೋಗಲಿಲ್ಲ. ಅವರ ಫೋನು ಸ್ವಿಚ್ ಆಫ್ ಆಗಿತ್ತು.